## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ, ಮುಳಬಾಗಿಲು

## ಸಿ.ಸಿ. ನಂ . 228/2018

ದಿನಾಂಕ ಃ 21.02.2025

| | | |
|---|---|---|
| ಹೆಸರು | ಃರಮೇಶ್ ಬಾಬು | ಸಿಡಬ್ಲ್ಯೂ- 02 |
| ಗಂಡನ ಹೆಸರು | ಃಬಿ. ಆರ್ ರಾಮಕೃಷ್ಣಪ್ಪ | ಪಿ ಡಬ್ಲ್ಯೂ- 03 |
| ವಯಸ್ಸು | ಃ45 ವರ್ಷ | |
| ಉದ್ಯೋಗ | ಃವ್ಯವಸಾಯ | |
| ವಾಸಸ್ಥಳ | ಃಬಿ.ಹೊಸಹಳ್ಳಿ | ಪ್ರಮಾಣ ವಚನ ಬೋಧಿಸಲಾಯಿತು. |

### ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ-3 ರಿಂದ 5 ರವರು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯೂ ಅದರ ಪ್ರತಿ ಪುಟದಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎಂ ರಿಂದ ಆರ್) ರವರೆಗೆ ಗುರುತಿಸಲಾಯಿತು. ಸದರಿ ಸಹಿಯನ್ನು ನಾನುನಮ್ಮ ಗ್ರಾಮದಲ್ಲಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲಿಸರು ನ್ನ ಸಮಕ್ಷಮ ಯಾವುದೇ ದಾಳಿ ನಡೆಸಿರುವುದಿಲ್ಲ. ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಪೊಲಿಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

### ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿ. 17.03.2017 ರಂದು ಚಾಸಾ1,6,7, ಮತ್ತು 11 ರಿಂದ 16 ರವರು ಮುಳಬಾಗಿಲು ತಾಲೂಕು ತಾಯಲೂರು ಹೋಬಳಿಯ ದೂಲಪಲ್ಲಿ ಪಂಚಾಯಿತಿ

ವ್ಯಾಪ್ತಿಯಲ್ಲಿ ಸೇರಿದ ಬಿ.ಹೊಸಹಳ್ಳಿ ಗ್ರಾಮದ ಸರ್ವೇ ನಂ. 130 ರ ಜಮೀನಿನಲ್ಲಿರುವ ಶೆಡ್ ನ ಮೇಲೆ ದಾಳಿ ಮಾಡಿ ಅಕ್ರಮವಾಗಿ ನಕಲಿಲ ಮದ್ಯವನ್ನು ಸಿದ್ದಪಡಿಸುತ್ತಿದ್ದಾಗ ಚಾಸಾ-1 ರವರು ನನ್ನ ಮತ್ತು ಚಾಸಾ 3,4 ರವರ ಸಮಕ್ಷಮ ಮದ್ಯಾಹ್ನ 12.00 ಗಂಟೆಯಿಂದ 3.30 ಗಂಟೆಯವರೆಗೆ ನನ್ನ ಮತ್ತು ಇತರೇ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಪಂಚನಾಮೆಯಡಿ ಈ ಕೆಳಕಂಡ ಮಾಲುಗಳಾದ 1) ಖಾಲಿ ರಟ್ಟಿನ ಪೆಟ್ಟಿಗೆಗಳು, 2) 06 ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್ಗಳು, 3) 50 ಖಾಲಿ ಕ್ಯಾನ್ಗಳು (33 ಲೀ ಸಾಮರ್ಥ್ಯ), 4) 5 ಲೀ. ಸಾಮರ್ಥ್ಯದ ಕ್ಯಾನ್ ನಲ್ಲಿ ಕಂದು ಬಣ್ಣದ ದ್ರಾವಕ "ಎಂ" ಎಂಬ ಅಕ್ಷರದಿಂದ ಮೊಹರು ಮಾಡಿರುತ್ತದೆ, 5) ಒಂದು ಬಾಟೆಲ್ ಕ್ರಿಯೇಟಿವ್ ಆರೋಮ್ಯಾಟಿಕ್ಸ್ ಸ್ಪೆಷಲೈಸೇಷನ್ ಪ್ರೈವೇಟ್ ಲಿಮಿಟೆಡ್, 6) ಒಂದು ಗಮ್, 7) ಒಂದು ಕಪ್ಪು ಬಣ್ಣದ ಖಾಲಿ ಪ್ಲಾಸ್ಟಿಕ್ ಕವರ್ ಬಂಡಲ್, 8) ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್, 9) ಒಂದು ನಿಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್ (ತಳಭಾಗದಲ್ಲಿ ಇರುತ್ತದೆ), 10) ಲೇಬಲ್ ಗಳಿಗರುವ ರೆಡ್ ರೋಸ್ ಫೈನ್ ಬ್ರಾಂದಿ, 11) ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಮದ್ಯದ ಬಾಟೆಲ್ ಗಳಿಗೆ ಹಾಕುವ ವೈಟ್ ಹೌಸ್ ಮುಚ್ಚಳಗಳು, 12) ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಂದು ಬಣ್ಣದ ಮತ್ತು ಗೋಲ್ಡನ್ ಬಣ್ಣದ ಮುಚ್ಚಳಗಳಿರುತ್ತವೆ, 13) 48 ಮದ್ಯದ ಬಾಟೆಲ್ ಗಳಿದ್ದು ಗ್ರೀನ್ ಮ್ಯಾಜಿಕ್ ಬ್ರಾಂದಿಯಾಗಿರುತ್ತದೆ (ಇವುಗಳ ಪೈಕಿ 10 ಬಾಟೆಲ್ ಗಳನ್ನು FSL ತಜ್ಞರಿಗೆ ಕಳುಹಿಸಲು ಎಂ ಅಕ್ಷರದಿಂದ ಮೊಹರು ಮಾಡಿರುತ್ತದೆ), 14) ಬಾಟೆಲ್ ಗಳಿಗೆ ಮುಚ್ಚಳಗಳನ್ನು ತ್ರೆಡಿಂಗ್ ಮಾಡುವ ಒಂದು ಯಂತ್ರ, 15) 36 ಪ್ಲಾಸ್ಟಿಕ್ ಕ್ಯಾನ್ ಗಳು(33 ಲೀ ಸಾಮರ್ಥ್ಯದ ಸ್ಪಿರಿಟ್ ತುಂಬಿರುತ್ತದೆ), 16) 36 ಸ್ಪಿರಿಟ್ ಕ್ಯಾನ್ ಗಳಿಂದ 36 ಬಾಟೆಲ್ ಗಳಲ್ಲಿ ತೆಗೆದಿರುವ ಸ್ಪಿರಿಟ್‌ನ್ನು ಎಂ ಅಕ್ಷರದಿಂದ ಮೊಹರು ಮಾಡಿರುತ್ತದೆ), 17) 110 ಪ್ಲಾಸ್ಟಿಕ್ ಕವರ್ ಗಳಲ್ಲಿದ್ದ 1,320 ಮದ್ಯದ ಬಾಟಲಿಗಳಿದ್ದು ಗೊಲ್ಕಂಡ ಬ್ರಾಂದಿಯಾಗಿರುತ್ತದೆ, 18) 10 ಗೊಲ್ಕಂಡ ಬ್ರಾಂದಿ ಬಾಟಲ್ ಗಳನ್ನು ಮಾದರಿಗಾಗಿ ತೆಗೆದಿರುತ್ತದೆ, 19) 40 ರಟ್ಟಿನ ಬಾಕ್ಸ್ ಗಳು (ಪ್ರತಿ ಬಾಕ್ಸಿ ನಲ್ಲಿ 100 ಖಾಲಿ ಬಾಟೆಲ್ ಗಳು ಇರುತ್ತವೆ), 20) 40 ನೀರಿನ ಕ್ಯಾನ್ ಗಳು, 21) ರಟ್ಟಿನ ಪೆಟ್ಟಿಗೆಯಲ್ಲಿ ಗ್ರೀನ್ ಬ್ರಾಂದಿ ರಾಜ್ ಕುಮಾರ್ ಡಿಸ್ಟಿಲರಿಸ್ ಲಿಮಿಟೆಡ್, ಪಾಂಡಿಚೇರಿ, 22) ರಟ್ಟಿನ ಪೆಟ್ಟಿಗೆಯಲ್ಲಿ ಗೊಲ್ಕಂಡ ಬ್ರಾಂದಿ ಪಾರ್ ಡಿಪೆನ್ಸ್ ಸರ್ವೀಸ್ ಕ್ಯಾಂಟೆನ್ ಎಂಬುದಾಗಿರುತ್ತದೆ, 23) ಮದ್ಯದ ತೀಕ್ಷಣತೆ ತೋರಿಸುವ ಒಂದು ಆಲ್ಕೋ ಮೀಟರ್,

ಪ್ಲಾಸ್ಟಿಕ್ ಜಾರ್ ಇದ್ದು ಅಂದಾಜು ಮೌಲ್ಯ 10,00,000/- ಬೆಲೆ ಬಾಳುವ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು ನಿಪಿ-1 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯೂ ಈ ಮೇಲಿನ ಹೇಳಿಕೆಯನ್ನು ಸಂಪೂರ್ಣವಾಗಿ ನಿರಾಕರಿಸಿದ್ದು, ಸಾಕ್ಷಿಯ ಹೇಳಿಕೆಯನ್ನು ನಿಪಿ -3 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 3 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಇರುವುದಿಲ್ಲ.</u>**

**<u>ಮರು ವಿಚಾರಣೆ</u>** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಮುಳಬಾಗಿಲು.

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ, ಮುಳಬಾಗಿಲು

## ಸಿ.ಸಿ. ನಂ . 228/2018

ದಿನಾಂಕ ಃ 21.02.2025

| | | |
|---|---|---|
| ಹೆಸರು | ಃ ವೆಂಕಟರಾಮಪ್ಪ | ಸಿಡಬ್ಲ್ಯೂ- 04 |
| ಗಂಡನ ಹೆಸರು | ಃ ಮುನಿರಾಮಪ್ಪ | ಪಿ ಡಬ್ಲ್ಯೂ- 04 |
| ವಯಸ್ಸು | ಃ 47 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ಬಿ.ಹೊಸಹಳ್ಳಿ | ಪ್ರಮಾಣ ವಚನ ಬೋಧಿಸಲಾಯಿತು. |

### ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ-2, 3 ಮತ್ತು 5 ರವರು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯೂ ಅದರ ಪ್ರತಿ ಪುಟದಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎಸ್ ರಿಂದ ಎಕ್ಸ್) ರವರೆಗೆ ಗುರುತಿಸಲಾಯಿತು. ಸದರಿ ಸಹಿಯನ್ನು ನಾನುನಮ್ಮ ಗ್ರಾಮದಲ್ಲಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲಿಸರು ನ್ನ ಸಮಕ್ಷಮ ಯಾವುದೇ ದಾಳಿ ನಡೆಸಿರುವುದಿಲ್ಲ. ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಪೊಲಿಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

### ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿ. 17.03.2017 ರಂದು ಚಾಸಾ1,6,7, ಮತ್ತು 11 ರಿಂದ 16 ರವರು ಮುಳಬಾಗಿಲು ತಾಲೂಕು ತಾಯಲೂರು ಹೋಬಳಿಯ ದೂಲಪಲ್ಲಿ ಪಂಚಾಯಿತಿ

ವ್ಯಾಪ್ತಿಯಲ್ಲಿ ಸೇರಿದ ಬಿ.ಹೊಸಹಳ್ಳಿ ಗ್ರಾಮದ ಸರ್ವೇ ನಂ. 130 ರ ಜಮೀನಿನಲ್ಲಿರುವ ಶೆಡ್ ನ ಮೇಲೆ ದಾಳಿ ಮಾಡಿ ಅಕ್ರಮವಾಗಿ ನಕಲಿಲ ಮದ್ಯವನ್ನು ಸಿದ್ದಪಡಿಸುತ್ತಿದ್ದಾಗ ಚಾಸಾ-1 ರವರು ನನ್ನ ಮತ್ತು ಚಾಸಾ 2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 12.00 ಗಂಟೆಯಿಂದ 3.30 ಗಂಟೆಯವರೆಗೆ ನನ್ನ ಮತ್ತು ಇತರೇ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಪಂಚನಾಮೆಯಡಿ ಈ ಕೆಳಕಂಡ ಮಾಲುಗಳಾದ 1) ಖಾಲಿ ರೆಟ್ಟಿನ ಪೆಟ್ಟಿಗೆಗಳು, 2) 06 ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್ಗಳು, 3) 50 ಖಾಲಿ ಕ್ಯಾನ್ಗಳು (33 ಲೀ ಸಾಮರ್ಥ್ಯ), 4) 5 ಲೀ. ಸಾಮರ್ಥ್ಯದ ಕ್ಯಾನ್ ನಲ್ಲಿ ಕಂದು ಬಣ್ಣದ ಧ್ರಾವಕ "ಎಂ" ಎಂಬ ಅಕ್ಷರದಿಂದ ಮೊಹರು ಮಾಡಿರುತ್ತದೆ, 5) ಒಂದು ಬಾಟೆಲ್ ಕ್ರಿಯೇಟಿವ್ ಆರೋಮ್ಯಾಟಿಕ್ಸ್ ಸ್ಪೆಷಲೈಸೇಷನ್ ಪ್ರೈವೇಟ್ ಲಿಮಿಟೆಡ್, 6) ಒಂದು ಗಮ್, 7) ಒಂದು ಕಪ್ಪು ಬಣ್ಣದ ಖಾಲಿ ಪ್ಲಾಸ್ಟಿಕ್ ಕವರ್ ಬಂಡಲ್, 8) ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್, 9) ಒಂದು ನಿಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್ (ತಳಭಾಗದಲ್ಲಿ ಇರುತ್ತದೆ), 10) ಲೇಬಲ್ ಗಳಿಗರುವ ರೆಡ್ ರೋಸ್ ಫೈನ್ ಬ್ರಾಂದಿ, 11) ಒಂದು ರೆಟ್ಟಿನ ಪೆಟ್ಟಿಗೆಯಲ್ಲಿ ಮಧ್ಯದ ಬಾಟೆಲ್ ಗಳಿಗೆ ಹಾಕುವ ವೈಟ್ ಹೌಸ್ ಮುಚ್ಚಳಗಳು, 12) ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಂದು ಬಣ್ಣದ ಮತ್ತು ಗೊಲ್ಡನ್ ಬಣ್ಣದ ಮುಚ್ಚಳಗಳಿರುತ್ತವೆ, 13) 48 ಮಧ್ಯದ ಬಾಟೆಲ್ ಗಳಿದ್ದು ಗ್ರೀನ್ ಮ್ಯಾಜಿಕ್ ಬ್ರಾಂದಿಯಾಗಿರುತ್ತದೆ (ಇವುಗಳ ಪೈಕಿ 10 ಬಾಟೆಲ್ ಗಳನ್ನು FSL ತಜ್ಞರಿಗೆ ಕಳುಹಿಸಲು ಎಂ ಅಕ್ಷರದಿಂದ ಮೊಹರು ಮಾಡಿರುತ್ತದೆ), 14) ಬಾಟೆಲ್ ಗಳಿಗೆ ಮುಚ್ಚಳಗಳನ್ನು ತ್ರೆಡಿಂಗ್ ಮಾಡುವ ಒಂದು ಯಂತ್ರ, 15) 36 ಪ್ಲಾಸ್ಟಿಕ್ ಕ್ಯಾನ್ ಗಳು(33 ಲೀ ಸಾಮರ್ಥ್ಯದ ಸ್ಪಿರಿಟ್ ತುಂಬಿರುತ್ತದೆ), 16) 36 ಸ್ಪಿರಿಟ್ ಕ್ಯಾನ್ ಗಳಿಂದ 36 ಬಾಟೆಲ್ ಗಳಲ್ಲಿ ತೆಗೆದಿರುವ ಸ್ಪಿರಿಟ್ನ್ನು ಎಂ ಅಕ್ಷರದಿಂದ ಮೊಹರು ಮಾಡಿರುತ್ತದೆ), 17) 110 ಪ್ಲಾಸ್ಟಿಕ್ ಕವರ್ ಗಳಲ್ಲಿದ್ದ 1,320 ಮಧ್ಯದ ಬಾಟಲಿಗಳಿದ್ದು ಗೊಲ್ಕಂಡ ಬ್ರಾಂದಿಯಾಗಿರುತ್ತದೆ, 18) 10 ಗೊಲ್ಕಂಡ ಬ್ರಾಂದಿ ಬಾಟಲ್ ಗಳನ್ನು ಮಾದರಿಗಾಗಿ ತೆಗೆದಿರುತ್ತದೆ, 19) 40 ರೆಟ್ಟಿನ ಬಾಕ್ಸ್ ಗಳು (ಪ್ರತಿ ಬಾಕ್ಸಿ ನಲ್ಲಿ 100 ಖಾಲಿ ಬಾಟೆಲ್ ಗಳು ಇರುತ್ತವೆ), 20) 40 ನೀರಿನ ಕ್ಯಾನ್ ಗಳು, 21) ರೆಟ್ಟಿನ ಪೆಟ್ಟಿಗೆಯಲ್ಲಿ ಗ್ರೀನ್ ಬ್ರಾಂದಿ ರಾಜ್ ಕುಮಾರ್ ಡಿಸ್ಟಿಲರಿಸ್ ಲಿಮಿಟೆಡ್, ಪಾಂಡಿಚೇರಿ, 22) ರೆಟ್ಟಿನ ಪೆಟ್ಟಿಗೆಯಲ್ಲಿ ಗೊಲ್ಕಂಡ ಬ್ರಾಂದಿ ಪಾರ್ ಡಿಪೆನ್ಸ್ ಸರ್ವೀಸ್ ಕ್ಯಾಂಟಿನ್ ಎಂಬುದಾಗಿರುತ್ತದೆ, 23) ಮಧ್ಯದ ತೀಕ್ಷ್ಣತೆ ತೋರಿಸುವ ಒಂದು ಆಲ್ಕೋ ಮೀಟರ್,

ಪ್ಲಾಸ್ಟಿಕ್ ಜಾರ್ ಇದ್ದು ಅಂದಾಜು ಮೌಲ್ಯ 10,00,000/- ಬೆಲೆ ಬಾಳುವ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು ನಿಪಿ-1 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯೂ ಈ ಮೇಲಿನ ಹೇಳಿಕೆಯನ್ನು ಸಂಪೂರ್ಣವಾಗಿ ನಿರಾಕರಿಸಿದ್ದು, ಸಾಕ್ಷಿಯ ಹೇಳಿಕೆಯನ್ನು ನಿಪಿ - 4 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 4 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಇರುವುದಿಲ್ಲ.**

**ಮರು ವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಮುಳಬಾಗಿಲು.